ಸರಿಪಡಿಸಿಕೊಂಡು, ಟಿಶ್ಯೂವಿನಿಂದ ಮುಖದಲ್ಲಿನ ಜಿಡ್ಡು ತೆಗೆದು... ಇದ್ದುದರಲ್ಲೇ ಅಷ್ಟಿಷ್ಟು ಫ್ರೆಷ್ಷನಿಸಿ, ಹೋಟೆಲಿನ ಲಾಬಿಯತ್ತ ಹೆಜ್ಜೆ ಹಾಕಿದೆನಷ್ಟೆ, ಎಲ್ಲಿದ್ದಳೋ ಕಾಣೆ, ಆಕಾಶದಿಂದ ಇಳಿದುಬಂದವಳಂತೆ ಕುಣಾಲಿ ಎದುರಾದಳು!

ಥತ್ತೇರಿ! ಇವಳು ಬೇರೆ ಸಿಗಬೇಕೆ? ಅದೂ ಈ ಹೊತ್ತಿನಲ್ಲಿ?! ಅದೃಷ್ಟವನ್ನು ಹಳಿದೆ.

'ಹಾಯ್ ಸರ್–ಜೀ... ವಾಟ್ಸ್ ಎ ಸರ್‌ಪ್ರೈಸ್... ಏನು ಇಲ್ಲಿ?' ನಗುತ್ತ ನಲಿಯುತ್ತ ಕೇಳಿದಳು.

'ವೆಲ್ಲ್... ಮೀಟಿಂಗ್ ಅಂತ ಬಂದೆ... ಹವ್ ಕಮ್ ಯು ಆರ್ ಹಿಯರ್?' ಒತ್ತಾಯದ ನಗೆ ನಕ್ಕೆ.

ಮತ್ತೆ ನಕ್ಕಳು. 'ಟೈಮ್ ಇದೆಯಾ? ಜಸ್ಟ್ ಟೆನ್ಸ್ ಮಿನಟ್ಸ್?'

ಸ್ವಲ್ಪ ತೆಳ್ಳಗಾಗಿದ್ದಾಳನ್ನಿಸಿ ಮತ್ತೂ ಚಂದ ಕಂಡಳು. ಚಂದದ ಮೋರೆ... ಚಂದದ ಕಣ್ಣುಗಳು... ಹೆಸರಿನ ಹಾಗೇ ಚಂದದ ಕಂಗಳ ಹಕ್ಕಿ! ಥತ್ತೇರಿ... ಅವಾಂತರದಲ್ಲಿದ್ದೂ ಇಷ್ಟೆಲ್ಲ ಗಮನಿಸುತ್ತಿದ್ದೇನಲ್ಲ... ಎಂದು ನನ್ನನಗೇ ನಗುಬಂತು.

'ನೋ ನಾಟ್ಸ್ ನವ್ಸ್, ಕುಣಾಲೀ...' ಅವಸರಿಸಿದೆ.

'ಓಹ್ ಸರ್–ಜೀ... ಯಾವಾಗಲೂ ಇದನ್ನೇ ಹೇಳುತೀರಿ. ನಿಮ್ಮ ಹಿತೈಷಿಗಳಿಗೋಸ್ಕರ ಕೊಂಚ ಟೈಮ್ ಮಾಡಿಕೊಳ್ಳಿ...'

ಸ್ವಲ್ಪ ಅತಿ ಅತಿ ಆಡಿದಳೆನಿಸಿ ಅಸಹನೆಯಾಯಿತಾದರೂ, ತೋರ್ಗೊಡದೆ ನಕ್ಕೆ.

'ನಿಮ್ಮನ್ನು ಬಂದು ಕಾಣಬೇಕು ಅಂತ ಎಷ್ಟು ಸರ್ತಿ ಮೆಸೇಜು ಮಾಡಿದೆ... ಯು ಡಿಡ್‌ನ್ಸ್ ರಿಪ್ಲೈ ಎಟ್ ಆಲ್...' ಸಣ್ಣನೆ ತಗಾದೆ ತೆಗೆದಳು.

'ಇಲ್ಲ... ಕೆಲಸ ಹೆಕ್ಟಿಕ್ ಆಗಿಬಿಟ್ಟಿದೆ... ವಿಲ್ ಕಾಲ್ ಯು ಒನ್ಸ್ ಆಫ್ ದೀಸ್ ಡೇಸ್... ಅದಿರಲಿ... ನೀನೇನು ಇಲ್ಲಿ? ಈಗಷ್ಟೇ ಬಂದಿದ್ದೋ, ಇಲ್ಲಾ ಹೊರಟಿದ್ದೋ?'

'ಕೇಮ್ ಜಸ್ಟ್ ನವ್ಸ್...'

ಕುಣಾಲಿ ಈಗಷ್ಟೇ ಬಂದಳೆಂಬ ಸತ್ಯವು ನನ್ನ ಮರ್ಮವನ್ನೇ ಮುಳ್ಳಾಗಿ ಇರಿಯಿತು! ಅಕಸ್ಮಾತ್, ಇವಳು ಆದ್ರಾಳೊಡನೆ ವ್ಯವಹರಿಸುತ್ತಿರುವ ನನ್ನನ್ನು ಕಂಡು ಬಿಟ್ಟರೆ?! ಮನಸ್ಸು ಮತ್ತೆ ಜಾಗರಣೆಗೆ ತೊಡಗಿತು! ಮುಂದೇನು ಗತಿ?! ಯಾತಕ್ಕೂ, ಇವೊತ್ತು ಆದ್ರಾಳನ್ನು ದೂರದಿಂದಲೇ ಮಾತನಾಡಿಸಬೇಕು... ಯಾವ ಕೋನದಿಂದಲೂ ಪ್ರೀತಿ–ಪ್ರಣಯದ ಭಂಗಿ ತಾಳಬಾರದು... ಎಷ್ಟು ಬೇಕೋ ಅಷ್ಟೇ ಇದ್ದು, ಸಭ್ಯನಾಗಿರಬೇಕು... ಎಚ್ಚರವನ್ನು ಎಚ್ಚರಿಸಿ ಹೇಳಿಕೊಂಡೆ.

'ಬನ್ನಿ... ನಾನೂ ನಿಮ್ಮ ಜೊತೆ ನಡೆದುಬರುತೀನಿ...' ಅಂತಂದ ಕುಣಾಲಿ, ನನ್ನ ಬದಿಸೇರಿ ನಡೆಯತೊಡಗಿದಳು. 'ಹವ್ ಈಸ್ ಭೂಮಿ ಮ್ಯಾಮ್? ಹವ್ ಅಬೌಟ್ ದಿಶಾ?' ಎಂದು ಮುಂದಿನೆರಡು ಹೆಜ್ಜೆಗೆಲ್ಲ ಕೇಳಿದಳು.

ಒಲ್ಲದ ದೇಶಾವರಿ. ಮುಜುಗರವಾಯಿತು. ನನಗೆ ಆ ಹೊತ್ತಿನಲ್ಲಿ ಮಾತು ಬೇಕಿರಲಿಲ್ಲ. ಪಾರ್ಕಿಂಗ್‌ಲಾಟ್‌ನಿಂದ ಹೋಟೆಲಿನ ಲಾಬಿಯವರೆಗಿನ ಇನ್ನೂರು ಮೀಟರುಗಳ ದಾರಿಯಲ್ಲಿ, ಆದ್ರಾಳೆದುರು ಆಡಬೇಕಾದುದನ್ನೆಲ್ಲ ರಿಹರ್ಸು ಮಾಡುವುದು ಅಂದುಕೊಂಡೆನಲ್ಲ... ಈ ಮನೆಹಾಳಿ ಸಿಕ್ಕಿ ಪಜ್ಜವಾಯಿತಲ್ಲ... ಛೇ... ಮರುಗುವುದಾಯಿತು. ಆದರೇನು ತಾನೇ ಮಾಡಲಾದೀತು? ಪರಿಚಯದ ದಾಕ್ಷಿಣ್ಯ ತಾನೇ? ಈ ಊರಿನ ದಾಕ್ಷಿಣ್ಯ...